

**◆ ನಿಮ್ಮ ವ್ಯಕ್ತಿತ್ವ ಮತ್ತು ಕಾವ್ಯದ ಮೇಲೆ ಪ್ರಭಾವ ಬೀರಿದ ಸಂಗತಿಗಳು ಯಾವುವು? ನಿಮ್ಮ ಕವಿತೆಗಳ ಅಂತರ್ಭಾವ ಅಥವಾ ಆಕೃತಿಯ ಮೇಲೆ ಅಸ್ಸಾಮಿನ ಕಾವ್ಯ ಪರಂಪರೆಯ ಪ್ರೇರಣೆ, ಪ್ರಭಾವಗಳಿವೆಯೇ?**

ಒಬ್ಬ ಲೇಖಕ ಅಥವಾ ಲೇಖಕಿಯ ವ್ಯಕ್ತಿತ್ವ ಮತ್ತು ಸೃಜನಶೀಲ ಸಾಮರ್ಥ್ಯಗಳು ಬಹುಮಟ್ಟಿಗೆ ಸಮಾಜೋ-ಸಾಂಸ್ಕೃತಿಕ ಮತ್ತು ಆರ್ಥಿಕ ಪರಿಸರದಿಂದ, ಸಮಾಜದ ನಡಾವಳಿ, ಕಟ್ಟಳೆಗಳಿಂದ ಮತ್ತು ಅವನು/ಅವಳು ಬೆಳೆಯುವ ಭೌಗೋಳಿಕ ಪ್ರದೇಶದ ಪ್ರಕೃತಿ ಸೌಂದರ್ಯದಿಂದ ಪ್ರಭಾವಿತಗೊಂಡಿರುತ್ತದೆ. ಇವುಗಳಿಂದ ನಾನೂ ಹೊರತಲ್ಲ. ನಾನು ಬೆಳೆದ ಸಮಾಜ ಏನಿದೆ, ಅದು ನನ್ನ ವ್ಯಕ್ತಿತ್ವವನ್ನು ರೂಪಿಸಿದ ಸಂಗತಿಗಳಲ್ಲಿ ಬಹಳ ಮುಖ್ಯ ಪಾತ್ರ ವಹಿಸಿದೆ. ಅದು ನನ್ನ ಕಾವ್ಯದ ವೈವಿಧ್ಯ, ವಸ್ತು ಮತ್ತು ಆಕೃತಿಗಳನ್ನು ಪ್ರಭಾವಿಸಿದೆ. ಜೊತೆಗೆ, ಪರಂಪರೆ, ಅದರ ವಿಕಸನ ಮತ್ತು ಅಸ್ಸಾಮೀ ಕಾವ್ಯದ ರಚನಾಮಾದರಿಗಳು ಮತ್ತು ವಸ್ತುವಿಷಯ ಕೂಡ ಸ್ವಲ್ಪಮಟ್ಟಿಗೆ ನನ್ನ ಕವಿತೆಯ ಮೇಲೆ ಪರಿಣಾಮ ಬೀರಿವೆ ಎನ್ನಬಹುದು. ಒಂದು ಹಾದಿಯಲ್ಲಿ ಕೆಲ ಕಾಲ ನಡೆದ ಬಳಿಕ ಯಾವುದೇ ನಿಜವಾದ ಕವಿಯು, ಆ ಪ್ರಭಾವಗಳಿಂದ ಬಿಡುಗಡೆಗೊಳ್ಳುತ್ತಾನೆ/ಳೆ. ಅವನು/ಅವಳು ತನ್ನದೇ ಆದ ಸೂಕ್ಷ್ಮಗಳು, ತಾಂತ್ರಿಕತೆ ಮತ್ತು ಶೈಲಿಗಳ ಮೂಲಕ ಮುನ್ನಡೆಯುತ್ತಾನೆ/ಳೆ.